ಚಿತ್ತಾಗಿದ್ದ ನಾನು, ಈಗ ಆತ ಚಿತ್ತಾಗುವುದನ್ನು ನೋಡಿ ದಂಗಾಗಿದ್ದೇನೆ. ಮಗಳು ಸ್ವಲ್ಪ ದೊಡ್ಡವಳಾಗಿದ್ದಾಳೆ. ಅಪ್ಪನನ್ನೇ ಸದಾ ಅಂಟಿಕೊಂಡಿರುತ್ತಾಳೆ. ಪ್ರತಿದಿನ ಆಕೆಗೆ ಏನಾದರೂ ಸ್ಪೆಷಲ್ ಐಟಮ್ ತರುತ್ತಾನೆ ರಂಜಿತ್. ನಾನು ಆಕೆಯನ್ನು ಗದರುವಂತೆಯೇ ಇಲ್ಲ. ಆತನಿಗೆ ನಾನು ಈಗ ಅಷ್ಟು ಇಷ್ಟವಾಗುತ್ತಿಲ್ಲವೇನೋ ಅನ್ನಿಸುತ್ತಿದೆ. ಇದು ನನ್ನ ಭ್ರಮೆಯಿದ್ದರೂ ಇರಬಹುದು. ಅಥವಾ, ಮದ್ಯ ಮತ್ತು ಸಿಗರೇಟು ನನಗಿಂತಲೂ ಆತನಿಗೆ ಹೆಚ್ಚಿನ ಕಿಕ್ ನೀಡಿರಬಹುದು.

ಕೆಲವು ದಿನಗಳಿಂದ ಮಾತುಮಾತಿಗೂ ಜಗಳ. ರೋಸಿಹೋಗಿದ್ದೇನೆ. ಒಮ್ಮೊಮ್ಮೆ ಬೇರೆ ಹಾಸಿಗೆಯೇ ನಮ್ಮಿಬ್ಬರಿಗೆ ಒಳಿತು ಎನ್ನಿಸುತ್ತದೆ. ಆದರೆ ಹಾಳಾದ ದೇಹ; ಒಮ್ಮೊಮ್ಮೆ ಮಾತು ಕೇಳುವುದಿಲ್ಲ; ಆತನ ಸಖ್ಯ ಬಯಸುತ್ತದೆ. ಬೆಡ್ ರೂಂಗಿಂತ ಅಡುಗೆ ಮನೆಯೇ ಹೆಚ್ಚು ಪ್ರಿಯವಾಗತೊಡಗಿದೆ. ಜೊತೆಯಲ್ಲಿ ನನ್ನ ಪಿಎಚ್.ಡಿ ಓದು, ಪ್ರಾಜೆಕ್ಟ್ ಇತ್ಯಾದಿ.

ಕೆಲವು ತಿಂಗಳುಗಳು ಕಳೆದವು. ಅದೊಂದು ದಿನ ನನಗೆ ನನ್ನ ಪ್ರಬಂಧಕ್ಕೆ ಪಿಎಚ್.ಡಿ.ಯೂ

